# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 264 (179) |
| ಸದಸ್ಯರ ಹೆಸರ | : | ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 18.08.2026 |
| ಉತ್ತರಿಸುವ ಸಚಿವರು | : | ಪೌರಾಡಳಿತ ಸಚಿವರು |

<table>
<tr><th>ಕ್ರ. ಸಂ.</th><th>ವಿಷಯ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಪಟ್ಟಣ ಪಂಚಾಯತ್, ಪುರಸಭೆ ಹಾಗೂ ನಗರಸಭೆಗಳಲ್ಲಿ ಸಮರ್ಪಕ ಸಂಖ್ಯೆಯಲ್ಲಿ ಪೌರ ಸೇವಾ ನೌಕರರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;</td><td>ಸರ್ಕಾರದ ಗಮನಕ್ಕೆ ಬಂದಿದೆ.</td></tr>
<tr><td>ಆ)</td><td>ಸದರಿ ಜಿಲ್ಲೆಗಳಲ್ಲಿ ಬರುವ ಸ್ಥಳೀಯ ಸಂಸ್ಥೆಗಳಿಗೆ ಮಂಜೂರಾದ ಪೌರಸೇವಾ ನೌಕರರ ಹುದ್ದೆಗಳೆಷ್ಟು; ಅದರಲ್ಲಿ ಭರ್ತಿ ಮಾಡಿದ ಹುದ್ದೆಗಳು ಹಾಗೂ ಬಾಕಿ ಇರುವ ಹುದ್ದೆಗಳೆಷ್ಟು (ವಿವರ ನೀಡುವುದು);</td><td>ಕಲಬುರ್ಗಿ ಜಿಲ್ಲೆಯಲ್ಲಿ 2 ನಗರಸಭೆಗಳು, 6 ಪುರಸಭೆಗಳೂ ಹಾಗೂ 3 ಪಟ್ಟಣ ಪಂಚಾಯಿತಿಗಳಿದ್ದು, ಅದರಲ್ಲಿ ಒಟ್ಟು 1124 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 577 ಜನ ಖಾಯಂ ನೌಕರರು ಕಾರ್ಯ ನಿರ್ವಹಿಸುತಿದ್ದು, ಉಳಿದ ಖಾಲಿ ಹುದ್ದೆಗಳಿಗೆದುರಾಗಿ ಗುತ್ತಿಗೆ, ಹೊರಗುತ್ತಿಗೆ, ದಿನಗೂಲಿ, ಕ್ಷೇಮಾಭಿವೃದ್ಧಿ, ಸಮಾನಕೆಲಸಕ್ಕೆ ಸಮಾನ ಕೆಲಸ ವೇತನದಡಿ ಒಟ್ಟು 331 ಜನ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಒಟ್ಟಾರೆ ಖಾಯಂ ಹಾಗೂ ಖಾಯಂಯೇತರ ಹುದ್ದೆಗಳಲ್ಲಿ ಒಟ್ಟು 908 ಜನ ನೌಕರರು ಕರ್ತವ್ಯನಿರ್ವಹಿಸುತ್ತಿದ್ದು, 216 ಖಾಲಿ ಹುದ್ದೆಗಳು ಇರುತ್ತವೆ, ಮಾಹಿತಿ ಈ ಕೆಳಕಂಡಂತಿದೆ.
<table>
<tr><th>ವರ್ಗ</th><th>ಮಂಜೂರಾದ ಹುದ್ದೆಗಳು</th><th>ಭರ್ತಿಯಾದ ಹುದ್ದೆಗಳು</th><th>ಗುತ್ತಿಗೆ/ ಹೊರಗುತ್ತಿಗೆ/ ದಿನಗೂಲಿ/ಸ.ಕೆ.ಸ.ವೇತನ/ ಕ್ಷೇಮಾ ಭಿವೃದ್ಧಿ</th><th>ಖಾಲಿ ಹುದ್ದೆಗಳು</th></tr>
<tr><td>ಗ್ರೂಪ್ ಎ</td><td>4</td><td>0</td><td>1</td><td>3</td></tr>
<tr><td>ಗ್ರೂಪ್-ಬಿ</td><td>16</td><td>13</td><td>0</td><td>3</td></tr>
<tr><td>ಗ್ರೂಪ್ ಸಿ</td><td>397</td><td>174</td><td>174</td><td>49</td></tr>
<tr><td>ಗ್ರೂಪ್ ಡಿ</td><td>707</td><td>390</td><td>156</td><td>161</td></tr>
<tr><td>ಒಟ್ಟು</td><td>1124</td><td>577</td><td>331</td><td>216</td></tr>
</table>
ಯಾದಗಿರಿ ಜಿಲ್ಲೆಯಲ್ಲಿ 3 ನಗರಸಭೆಗಳು, 3 ಪುರಸಭೆಗಳು ಹಾಗೂ 2 ಪಟ್ಟಣ ಪಂಚಾಯಿತಿಗಳಿದ್ದು, ಅದರಲ್ಲಿ ಒಟ್ಟು 1084 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 516 ಜನ ಖಾಯಂ ನೌಕರರು ಕಾರ್ಯನಿರ್ವಹಿಸುತ್ತಿದ್ದು, ಉಳಿದ ಖಾಲಿ ಹುದ್ದೆಗಳಿಗೆದುರಾಗಿ ಗುತ್ತಿಗೆ, ಹೊರಗುತ್ತಿಗೆ, ದಿನಗೂಲಿ, ಕ್ಷೇಮಾಭಿವೃದ್ಧಿ, ಸಮಾನ ಕೆಲಸಕ್ಕೆ ಸಮಾನ ಕೆಲಸ ವೇತನದಡಿ ಒಟ್ಟು 231 ಜನ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಒಟ್ಟಾರೆ ಖಾಯಂ ಹಾಗೂ ಖಾಯಂಯೇತರ ಹುದ್ದೆಗಳಲ್ಲಿ ಒಟ್ಟು 747 ಜನನೌಕರರು ಕರ್ತವ್ಯ ನಿರ್ವಹಿಸುತ್ತಿದ್ದು, 337 ಖಾಲಿ ಹುದ್ದೆಗಳು ಇರುತ್ತವೆ, ಮಾಹಿತಿ ಈ ಕೆಳಕಂಡಂತಿದೆ.</td></tr>
</table>

<table>
<tr>
<td></td>
<td></td>
<td>
<table>
<tr><th>ವರ್ಗ</th><th>ಮಂಜೂರಾದ ಹುದ್ದೆಗಳು</th><th>ಭರ್ತಿಯಾದ ಹುದ್ದೆಗಳು</th><th>ಗುತ್ತಿಗೆ/ ಹೊರ ಗುತ್ತಿಗೆ/ ದಿನಗೂಲಿ/ ಸ.ಕೆ.ಸ. ವೇತನ/ ಕ್ರೈಮಾಭಿವೃದ್ಧಿ</th><th>ಖಾಲಿ ಹುದ್ದೆಗಳು</th></tr>
<tr><td>ಗ್ರೂಪ್ ಎ</td><td>12</td><td>4</td><td>0</td><td>8</td></tr>
<tr><td>ಗ್ರೂಪ್-ಬಿ</td><td>20</td><td>6</td><td>0</td><td>14</td></tr>
<tr><td>ಗ್ರೂಪ್ ಸಿ</td><td>349</td><td>156</td><td>92</td><td>101</td></tr>
<tr><td>ಗ್ರೂಪ್ ಡಿ</td><td>703</td><td>350</td><td>139</td><td>214</td></tr>
<tr><td>ಒಟ್ಟು</td><td>1084</td><td>516</td><td>231</td><td>337</td></tr>
</table>
</td>
</tr>
<tr>
<td>ಇ)</td>
<td>ಪೌರ ಸೇವಾ ನೌಕರರ ಕೊರತೆ ಇದ್ದಲ್ಲಿ ಅದನ್ನು ಸರಿಪಡಿಸಲು ಸರ್ಕಾರ ಇದುವರೆವಿಗೂ ಕೈಗೊಂಡ ಕ್ರಮಗಳೇನು?</td>
<td>
ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳನ್ನೂ ಒಳಗೊಂಡಂತೆ ರಾಜ್ಯದ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಖಾಲಿ ಇರುವ ಪೌರ ಸೇವಾ ನೌಕರರ ವಿವಿಧ ವೃಂದಗಳ ಖಾಲಿ ಹುದ್ದೆಗಳ ಭರ್ತಿಗಾಗಿ ಕ್ರಮವಹಿಸಲಾಗಿರುತ್ತದೆ.
<u>ನೇರ ನೇಮಕಾತಿಯಡಿ ಹುದ್ದೆಗಳ ಭರ್ತಿಗೆ ಕೈಗೊಂಡ ಕ್ರಮದ ವಿವರ:</u>
ರಾಜ್ಯದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಖಾಲಿ ಇರುವ ವಿಭಿನ್ನ ಕೇಡರ್‌ಗಳ ಮೂಲ ವೃಂದದ 521 ಹುದ್ದೆಗಳನ್ನು ಭರ್ತಿಮಾಡಲು ಆರ್ಥಿಕ ಇಲಾಖೆಯ ಅನುಮತಿ ಕೋರಿ ಪೌರಾಡಳಿತ ನಿರ್ದೇಶನಾಲಯದಿಂದ ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ. ಪ್ರಸ್ತುತ ಕಲ್ಯಾಣ ಕರ್ನಾಟಕ ಭಾಗದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಗ್ರೂಪ್ 'ಬಿ' ವೃಂದದ 12 ಹುದ್ದೆಗಳನ್ನು ಭರ್ತಿಮಾಡಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ (KPSC) ಮತ್ತು ಗ್ರೂಪ್ 'ಸಿ' ವೃಂದದ 247 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (KEA) ಪ್ರಸ್ತಾವನೆ ಸಲ್ಲಿಲಾಗಿರುತ್ತದೆ.
ಗೆಜೆಟೆಡ್ ಪ್ರೊಬೇಷನರ್ ಹುದ್ದೆಯಾದ ಕೆಎಂಎಎಸ್ ಮುಖ್ಯಾಧಿಕಾರಿ ಶ್ರೇಣಿ-1 ರ ವೃಂದದ 20 ಹುದ್ದೆಗಳನ್ನು ಭರ್ತಿ ಮಾಡಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಮುಖಾಂತರ KPSC ಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಈ ಹುದ್ದೆಗಳ ಭರ್ತಿ ಕುರಿತಂತೆ KPSC ಯಿಂದ ಅಧಿಸೂಚನೆಯನ್ನು ಸಹ ಹೊರಡಿಸಲಾಗಿರುತ್ತದೆ. ಉಳಿದಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಗ್ರೂಪ್ 'ಸಿ' ವೃಂದದ 73 ಹುದ್ದೆಗಳ ಭರ್ತಿಗಾಗಿ ಕರ್ನಾಟಕ ಲೋಕಸೇವಾ ಆಯೋಗದಿಂದ ಅಭ್ಯರ್ಥಿಗಳ ಆಯ್ಕೆಗಾಗಿ ಸ್ಪರ್ಧಾತ್ಮಕ ಪರೀಕ್ಷೆಯು ಪೂರ್ಣಗೊಂಡು ತಾತ್ಕಾಲಿಕ ಆಯ್ಕೆಪಟ್ಟಿ ಬಿಡುಗಡೆ ಮಾಡಲಾಗಿರುತ್ತದೆ.
ಈ ರೀತಿಯಾಗಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ವಿವಿಧ ವೃಂದಗಳ ಖಾಲಿ ಹುದ್ದೆಗಳ ನೇರ ನೇಮಕಾತಿಯಡಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಕ್ರಮ ಕೈಗೊಳ್ಳಲಾಗಿರುತ್ತದೆ.
</td>
</tr>
</table>

ಸಂಖ್ಯೆ: ನಅಇ 39 ಎಲ್‌ಸಿಕ್ಯೂ 2026

**(ಹೆಚ್.ಸಿ. ಬಾಲಕೃಷ್ಣ)**
ಪೌರಾಡಳಿತ ಸಚಿವರು